ದಿನಾಂಕ 23.7.96ರಂದು ಅಮಾನತ್ತಿನಲ್ಲಿರಿಸಲಾದ ಪಿ.ಎಸ್.ಐ ಶ್ರೀ ಕೋನಪ್ಪ ರೆಡ್ಡಿ ಇವರನ್ನು ಕೇಂದ್ರವಲಯ ಆರಕ್ಷಕ ಉಪ ಮಹಾನಿರೀಕ್ಷಕರು ದಿನಾಂಕ 14.11.96ರಂದು ಅಮಾನತ್ತಿನಿಂದ ಬಿಡುಗಡೆಗೊಳಿಸಿದ್ದರು. ಆದರೆ ಕರ್ನಾಟಕ ರಾಜ್ಯದ ಪೋಲೀಸ್ ಮಹಾ ನಿರ್ದೇಶಕರು ಈ ಹಿಂದೆ ಯಾವ ಕಾರಣಗಳಿಂದ ಪಿ.ಎಸ್.ಐರವರನ್ನು ಅಮಾನತ್ತಿನಲ್ಲಿರಿಸಿದರೊ ಅದೇ ಕಾರಣದ ಮೇಲೆ ಪುನಃ ದಿನಾಂಕ 1.1.97ರಿಂದ ಅಮಾನತ್ತಿನಲ್ಲಿಟ್ಟಿರುತ್ತಾರೆ.

ಮೈಸೂರು ನಗರಕ್ಕೆ ಹೊಸ ವಿದ್ಯುತ್ ಯೋಜನೆ.

698 - ಶ್ರೀ ಹೆಚ್. ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಕ್ಕೆ ಸಂಬಂಧಿಸಿದಂತೆ 1977ರ ನಂತರ ಯಾವುದಾದರೂ ಹೊಸ ವಿದ್ಯುತ್ ಯೋಜನೆಗಳನ್ನು ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಅವುಗಳು ಯಾವುವು? ಸದರಿ ಉದ್ದೇಶಿತ ಯೋಜನೆಗಳ ಕೆಲಸ ಪ್ರಾರಂಭವಾಗಿದೆಯೇ?

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಈ) ಸದರಿ ಯೋಜನೆಗಳ ಕೆಲಸವನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಶರಣಪ್ಪಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಮೈಸೂರು ನಗರಕ್ಕೆ ಸಂಬಂಧಿಸಿದಂತೆ, ಮೈಸೂರು ಜಿಲ್ಲೆಯಲ್ಲಿ ಕೆಲವು ಜಲವಿದ್ಯುತ್ ಯೋಜನೆಗಳನ್ನು ಮತ್ತು ಒಂದು ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆ) 1. ಜಲವಿದ್ಯುತ್ ಯೋಜನೆಗಳು

ಅ. ಬೃಂದಾವನ ಕಿರು ಜಲವಿದ್ಯುತ್ ಯೋಜನೆ 12ಮೆ.ವ್ಯಾ.

ಆ. ಕಬಿನಿ ಆಣೇಕಟ್ಟು, ಕಿರು ಜಲವಿದ್ಯುತ್ ಯೋಜನೆ -20 ಮೆ.ವ್ಯಾ

ಇ. ಕಬಿನಿ ಬಲದಂಡೆ ಕಿರುಜಲವಿದ್ಯುತ್ ಯೋಜನೆ -3.00 ಮೆ.ವ್ಯಾ

ಈ. ಚುಂಚನಕಟ್ಟೆ ಕಿರು ಜಲವಿದ್ಯುತ್ ಯೋಜನೆ - 18.0 ಮೆ. ವ್ಯಾ

ಉ. ನುಗು ಕಿರು ಜಲವಿದ್ಯುತ್ ಯೋಜನೆ - 1.5 ಮೆ.ವ್ಯಾ

ಊ. ದೇವರಾಜ್ ಅರಸ್ ಕಿರು ಜಲವಿದ್ಯುತ್ ಯೋಜನೆ -6.00 ಮೆ.ವ್ಯಾಟ್

ಎ. ಶಿವನಸಮುದ್ರ ಕಾಲೀಕ ಜಲವಿದ್ಯುತ್ ಯೋಜನೆ - 270 ಮೆ. ವ್ಯಾಟ್

2 ಚಾಮಲಾಪುರ ಶಾಖೋತ್ಪನ್ನ ವಿದ್ಯುತ್ ಕೇಂದ್ರ (1000 ಮೆ.ವ್ಯಾಟ್) ಮೇಲಿನ

ನಿಗಮವೇ ಸ್ಥಾಪಿಸುತಲಿದ್ದು. ಈ ಯೋಜನೆಯ ಟೈಲ್‌ಟೇಸ್ ಕಾಲುವೆಯ ಕೆಲಸಗಳನ್ನು ಈಗಾಗಲೇ ಕೈಗೆತ್ತಿಕ್ಕೊಳ್ಳಲಾಗಿದೆ.

ಚುಂಚನಕಟ್ಟೆ ಕಿರು ಜಲವಿದ್ಯುತ್ ಯೋಜನೆಯ ಕೆಲಸಗಳು ಈಗಾಗಲೇ ಪ್ರಾರಂಭವಾಗಿದ್ದು ಪ್ರಗತಿಯು ವಿವಿಧ ಹಂತದಲ್ಲಿದೆ.

ಶಿವನಸಮುದ್ರ ಕಾಲೀಕ ಜಲವಿದ್ಯುತ್ ಯೋಜನೆಯು ಕಾವೇರಿ ಕೊಳ್ಳದಲ್ಲಿದ್ದು ತಮಿಳುನಾಡು ನೊಂದಗಿನ ಕಾವೇರಿ ಜಲವಿವಾದದಲ್ಲಿ ಸೇರಿಕೊಂಡಿರುತ್ತದೆ.

೫) ಕಬಿನಿ ಆಣೇಕಟ್ಟು, ಕಬಿನಿ ಬಲದಂಡೆ, ನುಗ್ಗು, ದೇವರಾಜ ಅರಸ್ ಕಾಲುವೆ ಮುಂತಾದ ಕಿರು ಜಲವಿದ್ಯುತ್ ಯೋಜನೆಗಳನ್ನು ಖಾಸಗೀ ಸಂಸ್ಥೆಗಳಿಗೆ ವಹಿಸಿಕೊಡಲಾಗಿದ್ದು, ಪ್ರಾರಂಭಿಕ ಕೆಲಸಗಳು ವಿವಿಧ ಹಂತದಲ್ಲಿದೆ.

ಚಾಮಲಾಪುರ ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕೇಂದ್ರೀಯ ವಿದ್ಯುತ್ ಪ್ರಾಧಿಕಾರದಿಂದ ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ನೊರಕಿದೆ ಹಾಗೂ ಇತರೆ ಅನುಮೋದನೆಗಳನ್ನು ಪಡೆಯುವ ಬಗ್ಗೆ ಕಂಪನಿಯ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ರಾಜ್ಯದಲ್ಲಿ ಸಾರಾಯಿ ನಿಷೇಧ

705 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಷೇಧಿಸಲು ಸರ್ಕಾರದ ಬಯಸಿದೆಯೇ?

ಆ) ಹಾಗಿದ್ದಲ್ಲಿ ಈ ನಿಷೇಧದಿಂದ ಸರ್ಕಾರದ ಬೊಕ ಸಕೆ ಆಗುವ ನಷ್ಟವೆಷ್ಟು? ಈ ನಷ್ಟವನ್ನು ತುಂಬಲು ಸರ್ಕಾರ ಪರ್ಯಾಯ ಕಾರ್ಯಕ್ರಮ ಹೊಂದಿದೆಯೇ?

ಇ) ಈ ಮಾರಾಟ ನಿಷೇದದಿಂದ ನಿರುದ್ಯೋಗಿ ಗಳಾಗುವವರಿಗೆ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡುವುದೇ? ಹಾಗಿದ್ದಲ್ಲಿ ಅವುಗಳು ಯಾವುವು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅದೇ

ಎ.ಇ.ಹೆಚ್. ಮೀಟರ್‌ಗಳ ಖರೀದಿಗೆ ಟೆಂಡರ್ ಕರೆದಿರುವುದು

711 - ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?